# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಕ್ರಿ. ಮಿಸಿಲೆ.** ನಂ. 42-2017 **ಪಿ . ಡಬ್ಲು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್.ಶಿವಕುಮಾರಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 17-12-2022. |

**ಮುಂದುವರೆದ ಪಾಟೀ ಸವಾಲು: ಎದುರುದಾರರ ಪರ ವಕೀಲರಾದ ಶ್ರೀಮತಿ ಜಿ.ಇ.ಡಿ ರವರಿಂದ:**

ನಾನು ಮದುವೆಯಾದ ಪ್ರಾರಂಭದಿಂದಲೂ ಎದುರುದಾರರೊಂದಿಗೆ ಹೊಂದಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರ ಅಕ್ಕನ ಮಗಳಾದ ಕಾರಣ ನಾನು ಸರಿಹೋಗಬಹುದು ಎಂದು 5 ವರ್ಷಗಳ ಕಾಲ ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ಬುದ್ಧಿವಾದ ಹೇಳಿದ ಸಮಯದಲ್ಲಿ ವರ್ಷಕ್ಕ 2-3 ಭಾರಿ ನಾನು ಅವರೊಂದಿಗೆ ಕೆಲವು ಗಂಟೆಗಳ ಕಾಲ ಚೆನ್ನಾಗಿ ಇದ್ದಿದ್ದರಿಂದ ನಮಗೆ 2 ಮಕ್ಕಳಾಗಿರುತ್ತವೆ ಎಂದರೆ ಸಾಕ್ಷಿ 2 ಮಕ್ಕಳಾಗಿರುವುದು ನಿಜ ಎಂದು ನುಡಿಯುತ್ತಾರೆ.

2. ನಾನು ಬೆಳಗ್ಗೆ ತಡವಾಗಿ ಏಳುತ್ತಿದ್ದು, ಎದುರುದಾರರು ನನಗೆ ಬುದ್ಧಿವಾದ ಹೇಳಿದರೆ ನಾನು ಅವರ ಕೊರಳಪಟ್ಟಿಯನ್ನು ಹಿಡಿದುಕೊಂಡು ಹೊರಗೆ ಎಳೆದುಕೊಂಡು ಹೋಗಿ ಹೊಡೆಯುತ್ತಿದ್ದು, ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದೆನು ಎಂದರೆ ಸರಿಯಲ್ಲ. ಎದುರುದಾರರು ನನಗೆ ಏನಾದರೂ ಬುದ್ಧಿವಾದ ಹೇಳಿದರೆ ಆ ಸಮಯ ನಾನು ಎದುರುದಾರರಿಗೆ ನಿನ್ನ ಮೇಲೆ ವರದಕ್ಷಿಣೆ ಕಿರುಕುಳದ ಕೇಸು ನೀಡಿ ಕೆಲಸದಿಂದ ತೆಗಿಸಿ ಭಿಕ್ಷೆ ಬೇಡುವಂತೆ ಮಾಡುತ್ತಿದ್ದೆನು ಎಂದು ಪ್ರತಿದಿನ ಬೈಯುತ್ತಿದ್ದೆನು ಎಂದರೆ ಸರಿಯಲ್ಲ. ಎದುರುದಾರರು ಸತ್ತರೆ ನಿನ್ನ ಕೆಲಸ ನನಗೆ ಬರುತ್ತದೆ, ದುಡ್ಡು ಬರುತ್ತದೆ ಎಂದು ಅವರ ಎದುರಿಗೆ ಹೇಳುತ್ತಿದ್ದೆನು ಎಂದರೆ ಸರಿಯಲ್ಲ. ನಾನು ನನ್ನ ಮಗ ಲಕ್ಷ್ಮೀಕಾಂತನ ಬಾಣಂತನ ಮುಗಿಸಿಕೊಂಡು ಬಂದ ನಂತರ ಎದುರುದಾರರಿಗೆ

ಅವರ ತಾಯಿ ಮತ್ತು ಅವಿವಾಹಿತ ಅಕ್ಕನನ್ನು ಹೊರಗೆ ಕಳುಹಿಸಿ ಬಡವರಾದ ನನ್ನ ತಂದೆ-ತಾಯಿಗಳನ್ನು ಮನೆಗೆ ಕರೆತಂದು ಶಾಶ್ವತವಾಗಿ ಇರಿಸಿಕೊಳ್ಳಬೇಕು ಎಂದು ಒತ್ತಡ ಹೇರುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಎದುರುದಾರರ ಮೇಲೆ ಒತ್ತಡ ಹೇರುವ ಉದ್ದೇಶದಿಂದ ನಾನು 6 ಭಾರಿ ಆತ್ಮಹತ್ಯೆಗೆ ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರ ತಾಯಿ, ಅಕ್ಕ ಮತ್ತು ಅಣ್ಣಂದಿರು ನನ್ನ ಮೇಲೆ ಒತ್ತಡ ಹೇರುತ್ತಿದ್ದರು ಎಂದು ನುಡಿಯುತ್ತಾರೆ.

3. ಸಂತೆಮರಹಳ್ಳಿಯ ಎದುರುದಾರರ ಮನೆಯಲ್ಲಿ ನಾನು, ಎದುರುದಾರರು, ನನ್ನ ಮಗ, ಎದುರುದಾರರ ತಾಯಿ ಮತ್ತು ಅಕ್ಕ ವಾಸವಿದ್ದೆವು ಎಂದರೆ ಸಾಕ್ಷಿ ಮೊದಲಿಗೆ ಒಂದು ವರ್ಷಗಳ ಕಾಲ ನನ್ನ ಅಕ್ಕ-ಭಾವ ನಾನು, ಎದುರುದಾರು, ನಮ್ಮ ಮಗ, ಎದುರುದಾರ ತಾಯಿ ಮತ್ತು ಅಕ್ಕ ವಾಸವಿಸಿದ್ದು, ಆನಂತರ ನನ್ನ ಅಕ್ಕ-ಭಾವ ಬೇರೆಕಡೆ ಮನೆ ಮಾಡಿಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರ ಅಣ್ಣನಾದ ಚಂದ್ರಶೇಖರ್ ರವರಿಗೆ ನನ್ನ ಸ್ವಂತ ಅಕ್ಕನನ್ನು ಮದುವೆ ಮಾಡಿಕೊಡಲಾಗಿರುತ್ತದೆ ಎಂದರೆ ಸರಿ. ನನ್ನ ಅಕ್ಕ ಮತ್ತು ಭಾವನವರಿಗೆ ಸರಿಯಾದ ದುಡಿಮೆ ಇಲ್ಲದೇ ಇದ್ದ ಕಾರಣ ಅವರನ್ನು ಎದುರುದಾರರ ಮನೆಯಲ್ಲಿ ಇರಿಸಿಕೊಂಡಿದ್ದು, ನಾನು ನನ್ನ ಸ್ವಂತ ಅಕ್ಕನೊಂದಿಗೂ ಸಹ ಹೊಂದಿಕೊಳ್ಳದೆ ಅವರನ್ನು ಮನೆಯಿಂದ ಹೊರಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಭಾವ ಬಳೆ ಶಾಪ್‌ಅನ್ನು ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ.

4. ಎದುರುದಾರರು ಮನೆಕಟ್ಟುವ ಸಮಯ ನನ್ನ ತಂದೆ-ತಾಯಿಗಳಿಂದ ರೂ.1,50,000/- ಗಳನ್ನು ಪಡೆದುಕೊಂಡಿರುವುದಿಲ್ಲ, ಆ ರೀತಿ ಹಣ ನೀಡುವ ಅರ್ಥಿಕ ಚೈತನ್ಯ ನನ್ನ ತಂದೆ-ತಾಯಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಎದುರುದಾರರು ರೂ.3,00,000/- ಗಳನ್ನು ಕೇಳಿದ್ದರು ಎಂದು ನಮೂದಿಸಲಾಗಿರುತ್ತದೆ ವಿನಃ ಹಣ ಕೊಟ್ಟ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಹಣ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

5. ಚಾಮರಾಜನಗರದ ನ್ಯಾಯಾಲಯದಲ್ಲಿ ನಡೆಯುತ್ತಿರುವ ಎಂ.ಸಿ ಪ್ರಕರಣದಲ್ಲಿ ರೂ.3,00,000/- ಗಳನ್ನು ಮತ್ತು ಚಿನ್ನವನ್ನು ಎದುರುದಾರರಿಗೆ ಕೊಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ನಂಜನಗೂಡಿನ ಹಿರಿಯ ಸಿವಿಲ್ ನ್ಯಾಯಾಧೀಶರ, ನ್ಯಾಯಾಲಯದಲ್ಲಿ ಹಿಂದೂ ವಿವಾಹ ಕಾಯ್ದೆ ಕಲಂ.9 ರಡಿ ಸಲ್ಲಿಸಿರುವ ಪ್ರಕರಣದಲ್ಲಿ ಎದುರುದಾರರು ರೂ.5,00,000/- ಗಳನ್ನು ತರುವಂತೆ ಒತ್ತಾಯಿಸಿದ್ದು, ನಾನು ಹಣ

ಕೊಡದೇ ಇದ್ದುದ್ದರಿಂದ ನನ್ನನ್ನು ಮನೆಯಿಂದ ಹೊರಹಾಕಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಮದುವೆ ಸಮಯದಲ್ಲಾಗಲಿ, ಆನಂತರದ ಸಮಯದಲ್ಲಾಗಲಿ ನನ್ನ ತಂದೆಯವರಿಗೆ ಹಣ ನೀಡುವಷ್ಟು ಚೈತನ್ಯವಿರಲಿಲ್ಲ ಹಾಗೂ ಮದುವೆ ಸಮಯ ಒಂದು ಜೊತೆ ಬಟ್ಟೆಯನ್ನು ನನ್ನ ತಂದೆಯವರು ಎದುರುದಾರರಿಗೆ ನೀಡದೇ ಇದ್ದ ಕಾರಣ ಮದುವೆಯನ್ನು ಎದುರುದಾರರೇ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮದುವೆ ಸಮಯಲ್ಲಿ ನನ್ನ ತಂದೆ ಎದುರುದಾರರಿಗೆ ಸೂಟು, ಬೂಟು, ಚೈನ್ ಮತ್ತು ಉಂಗುರ, ಬೈಕ್ ಮತ್ತು ವರದಕ್ಷಿಣೆ ಆಗಿ ಹಣವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದಿ.23-05-2016 ರಂದು ನಾನು ಎದುರುದಾರರ ಮನೆಯಿಂದ ಹೊರಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯ ನಾನು ಒಂದುವರೆ ತಿಂಗಳ ಗರ್ಭಿಣಿ ಇದ್ದು ಆಸ್ಪತ್ರೆಗೆ ತೋರಿಸುತ್ತೇನೆ ಎಂದು ಹೇಳಿ ನನ್ನ ತವರು ಮನೆಗೆ ತಂದು ಬಿಟ್ಟರುತ್ತಾರೆ ಎಂದು ನುಡಿಯುತ್ತಾರೆ.

6. ನಾನು 2016 ರ ಮೇ ತಿಂಗಳ ಮೊದಲನೆ ವಾರದಲ್ಲಿ ಒಮ್ಮೆ ಹಾಗೂ ದಿ.22-05-2016 ರಂದು ಕೊನೆಯಭಾರಿಗೆ ನಾನು ಎದುರುದಾರರ ಮನೆಯಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗರ್ಭಿಣಿ ಆಗಿದ್ದರಿಂದ ಎದುರುದಾರರ ತಾಯಿ ಮತ್ತು ಅಕ್ಕನನ್ನು ಹೊರಹಾಕಿ ನನ್ನ ತಂದೆ-ತಾಯಿಗಳನ್ನು ಮನೆಗೆ ಕರೆಯಿಸಿಕೊಳ್ಳಲು ಒತ್ತಡ ಹೇರಿದ್ದು, ಆ ಸಮಯ ಎದುರುದಾರರು ನಿರಾಕರಿಸಿದ್ದರಿಂದ ನಾನು ದಿ.22-05-2016 ರಂದು ಆತ್ಮಹತ್ಯೆಗೆ ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ದಿ.23-05-2016 ರಂದು ನನ್ನ ತಾಯಿಯವರನ್ನು ಮನೆಗೆ ಕರೆಯಿಸಿಕೊಂಡು ಎದುರುದಾರರಿಗೆ ಹೇಳದೆ ನನ್ನ ತವರು ಮನೆಗೆ ಹೊರಟುಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರೇ ನನ್ನನ್ನು ನನ್ನ ತವರು ಮನೆಗೆ ಕರೆದುಕೊಂಡು ಬಂದು ಬಿಟ್ಟರುತ್ತಾರೆ ಎಂದು ನುಡಿಯುತ್ತಾರೆ. ದಿ.11-07-2016 ರಂದು ನಾನು, ನನ್ನ ತಂದೆ-ತಾಯಿಗಳು ಎದುರುದಾರನ ತಂದೆ ಮನೆಗೆ ಬಂದು ಆತನನ್ನು ಬೀದಿ ತುಂಬಾ ಎಳೆದಾಡಿ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಮತ್ತು ನನ್ನ ತಂದೆ-ತಾಯಿಗಳಿಗೆ ಎದುರುದಾರರೇ ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಹಲ್ಲೆ ಸಂಬಂಧ ಎದುರುದಾರ ಯಳಂದೂರು ಪೊಲೀಸ್ ಠಾಣೆಯಲ್ಲಿ ನನ್ನ ಮತ್ತು ನನ್ನ ತಂದೆ-ತಾಯಿಗಳ ವಿರುದ್ಧ ದೂರು ನೀಡಿದ್ದರು

ಎಂದರೆ ಸರಿಯಲ್ಲ. ಆ ಸಮಯ ನಾನು, ನನ್ನ ತಂದೆ-ತಾಯಿಗಳು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದು ಸದರಿ ಹೇಳಿಕೆಯಲ್ಲಿ ನನ್ನ ತಂದೆ-ತಾಯಿಗಳು ದಿ.23-05-2016 ರಂದು ನನ್ನ ಮಗಳಿಗೂ ಅಳಿಯನಿಗೂ ಜಗಳವಾಗಿ ನಮ್ಮೊಂದಿಗೆ ಬಂದಿದ್ದು, ಇನ್ನು ಮುಂದೆ ನಾವು ಅವರುಗಳ ಜೀವನದಲ್ಲಿ ತಲೆ ಹಾಕುವುದಿಲ್ಲವೆಂದು ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಿವಾಹವಾದ ನಂತರದ 5 ವರ್ಷಗಳ ಅವಧಿಯಲ್ಲಿ ನಾನು ಎದುರುದಾರರಿಗೆ ನೀಡಿದ ಮಾನಸಿಕ ಹಾಗೂ ದೈಹಿಕ ಕಿರುಕುಳ ಮತ್ತು ನಾನು ಮತ್ತು ನನ್ನ ತಂದೆತಾಯಿಗಳು ಎದುರುದಾರರಿಗೆ ಹಲ್ಲೆ ಮಾಡಿದ್ದರಿಂದ ಮತ್ತು ನಾನು 6 ಭಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರಿಂದ ಇನ್ನು ಮುಂದೆ ನನ್ನ ಜೊತೆ ಜೀವನ ಮಾಡುವುದು ಅಪಾಯ ಮತ್ತು ಅಸುರಕ್ಷಿತ ಎಂಬ ಉದ್ದೇಶದಿಂದ ಚಾಮರಾಜನಗರ ಹಿರಿಯ ಸಿವಿಲ್ ಶ್ರೇಣಿ ನ್ಯಾಯಾಲಯದಲ್ಲಿ ಎಂ.ಸಿ.ನಂ.33/2016 ರಂತೆ ನನ್ನ ವಿರುದ್ಧ ವಿಚ್ಛೇದನಕ್ಕಾಗಿ ಅರ್ಜಿಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ವಿಚ್ಛೇದನಕ್ಕಾಗಿ ಅರ್ಜಿಸಲ್ಲಿಸಿರುವುದು ನಿಜ. ಸಾಕ್ಷಿ ಮುಂದುವರೆದು ನಾನಾಗಲಿ, ನನ್ನ ತಂದೆ-ತಾಯಿಯಾಗಲಿ ಎದುರುದಾರರ ಮೇಲೆ ಹಲ್ಲೆ ಮಾಡಿರುವುದಿಲ್ಲ ನಾನು ಆತ್ಮಹತ್ಯೆಗೂ ಪ್ರಯತ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ.

7. ನಾನು ನನ್ನ ಅರ್ಜಿಯಲ್ಲಿ ತಿಳಿಸಿರುವ ವಿಷಯಗಳು ಸುಳ್ಳಿನಿಂದ ಕೂಡಿದ್ದು, ನನ್ನ ಮತ್ತು ಎದುರದಾರರ ನಡುವೆ ದಿ.23-05-2016 ರಿಂದ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ಆಗಾಗ ಬಂದು ಕರೆದುಕೊಂಡು ಹೋಗುತ್ತಾರೆ ಎಂದು ನುಡಿಯುತ್ತಾರೆ. ಸುಮಾರು 7 ಪ್ರಕರಣಗಳು ನನ್ನ ಮತ್ತು ಎದುರುದಾರರ ನಡುವೆ ಬೇರೆ ಬೇರೆ ನ್ಯಾಯಾಲಯಗಳಲ್ಲಿ ನಡೆಯುತ್ತಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 7 ಪ್ರಕರಣಗಳು ಅಲ್ಲ, 6 ಪ್ರಕರಣಗಳು ಎಂದು ನುಡಿಯುತ್ತಾರೆ. ನನ್ನ ಘೋಷಣಾ ಪ್ರಮಾಣ ಪತ್ರದ 6 ನೇ ಕಾಲಂನಲ್ಲಿ 6 ವರ್ಷಗಳ ಹಿಂದೆ ಪ್ರತ್ಯೇಕವಾಗಿರುತ್ತವೇ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ಆಗಾಗ ಬಂದು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು ಬಂದು ನನ್ನೊಂದಿಗೆ ಇರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ಎದುರದಾರರ ನನ್ನೊಂದಿಗೆ ಇರುತ್ತಾರೆ ಎಂಬುದು ಭ್ರಮೆ ಎಂದರೆ ಸರಿಯಲ್ಲ.

8. ನನಗೆ ಹೆಣ್ಣು ಮಗುವಾದ ಹಾಗೂ ಆ ಮಗುವು ಕಾಯಿಲೆಯಿಂದ ತೀರಿಕೊಂಡ ವಿಚಾರವನ್ನು ನಾನು ಎದುರುದಾರರಿಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಗುವಿಗೆ ರೂ.2,00,000/- ಗಳು ಖರ್ಚು ಮಾಡಿರುತ್ತೇವೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರೂ.2,00,000/- ಗಳನ್ನು ಖರ್ಚು ಮಾಡಿ ತೆರೆದ ಹೃದಯದ ಚಿಕಿತ್ಸೆ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ದಿ.12-09-2017 ರಂದು ಮಗುವಿನ ಶವಸಂಸ್ಕಾರಕ್ಕೆ ಎದುರುದಾರರು ಬರಲು ಸಿದ್ಧವಿದ್ದು, ಆ ಸಮಯ ನಾನು ಮತ್ತು ಸಂಬಂಧಿಕರು ಎಲ್ಲಾ ಸೇರಿ ಎದುರುದಾರರ ಜೀವ ತೆಗೆಯಬೇಕು ಎಂದು ಮಾತನಾಡುತ್ತಿದ್ದ ವಿಷಯವನ್ನು ನನ್ನ ಭಾವ ಚಂದ್ರಶೇಖರ್ ರವರು ಕೇಳಿಸಿಕೊಂಡು ಎದುರುದಾರರಿಗೆ ತಿಳಿಸಿದ್ದರಿಂದ ಅವರು ಶವಸಂಸ್ಕಾರಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲಿಗೆ ನಾನು ಮತ್ತು ನನ್ನ ತಂದೆ-ತಾಯಿಗಳು ಎದುರುದಾರರ ಮೇಲೆ ಹಲ್ಲೆ ಮಾಡಿದ್ದರಿಂದ ಎದುರುದಾರರು ಜೀವ ತೆಗೆಯಬಹುದು ಎಂಬ ಭಯದಿಂದ ಮಗುವಿನ ಶವಸಂಸ್ಕಾರಕ್ಕೆ ಬರದೇ ಇದ್ದ ಕಾರಣ ನಾನು ಸುಮಾರು 32 ಜನರನ್ನು ಕರೆದುಕೊಂಡು ಹೋಗಿ ಎದುರುದಾರರು ಕೆಲಸ ಮಾಡುವ ಗೂಳಿಪುರ ಶಾಲೆ, ಎದುರುದಾರರು ವಾಸವಿರುವ ಸಂತೆಮರಹಳ್ಳಿ ಮತ್ತು ಎದುರುದಾರರ ತಂದೆ ಮನೆಯಾದ ಯಳಂದೂರಿಗೆ ಸತ್ತ ಮಗುವಿನ ಶವವನ್ನು ತೆಗೆದುಕೊಂಡು ಹೋಗಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಗುವಿನ ಮುಖವನ್ನು ಎದುರುದಾರರು ಕೊನೆಯಭಾರಿ ನೋಡಲಿ ಹಾಗೂ ಮರುವಿನ ಶವಸಂಸ್ಕಾರ ಎದುರುದಾರರ ಊರಲ್ಲೇ ಆಗಲಿ ಎಂಬ ಉದ್ದೇಶದಿಂದ ಮಗವಿನ ಶವವನ್ನು ತೆಗೆದುಕೊಂಡು ಹೋಗಿರುತ್ತೇವೆ ವಿನಃ ಗಲಾಟೆ ಮಾಡುವ ಉದ್ದೇಶದಿಂದ ಅಲ್ಲ ಎಂದು ನುಡಿಯುತ್ತಾರೆ. ಆ ಸಮಯ ನಾವು ಎದುರುದಾರರನ್ನು ಉದ್ದೇಶಿಸಿ ಸೂಳೆ ಮಗ ಬೋಳಿ ಮಗ ಎಂದು ಬೈದು ಆತನು ಶಿಕ್ಷಕನಾಗಲು ಯೋಗ್ಯನಲ್ಲ ಎಂದು ಸಿಕ್ಕರೆ ಪ್ರಾಣತಗೆಯುತ್ತೇವೆ ಎಂದು ಜನರನ್ನು ಕರೆದು ತೋರಿಸಿ ಸಮಾಜದಲ್ಲಿ ಎದುರುದಾರರಿಗೆ ಅವಮಾನ ಮಾಡಿರುತ್ತೇನೆ ಎಂದರೆ ಸರಿಯಲ್ಲ.

9. ಹಿಂದೂ ಧರ್ಮದಲ್ಲಿ ಶವನನ್ನು ದೇವರ ಸಮಾನ ಎಂದು ಪರಿಗಣಿಸುತ್ತಿದ್ದು, ನಾನು ನನ್ನ ಸತ್ತ ಮಗವಿನ ಹಣವನ್ನು ಸಹ ಎದುರುದಾರರ ವಿರುದ್ಧ ಸೇಡು ತೀರಿಸಿಕೊಳ್ಳಲು ಬಳಸಿಕೊಂಡು ಸತ್ತ ನನ್ನ ಮಗುವಿನ ಶವಕ್ಕೆ ಅವಮಾನ ಮಾಡಿರುತ್ತೇ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೆಣವನ್ನು ಎದುರುದಾರರಿಗೆ ತೋರಿಸುವ ಉದ್ದೇಶದಿಂದ

ತೆಗೆದುಕೊಂಡು ಹೋಗಿರುತ್ತೇನೆ ವಿನಃ ಬೇರೆ ಯಾವುದೇ ಉದ್ದೇಶದಿಂದ ಅಲ್ಲ ಎಂದು ನುಡಿಯುತ್ತಾರೆ. ನಾನು ಎದುರುದಾರರಿಗೆ ಮತ್ತು ಸತ್ತ ಮಗವಿಗೆ ಅವಮಾನ ಮಾಡಿದ್ದರಿಂದ ಎದುರುದಾರರು ನನ್ನ ಮತ್ತು ಇತರ 32 ಜನರ ವಿರುದ್ಧ ಚಾಮರಾಜನಗರದ ಹಿರಿಯ ಸಿವಿಲ್ ನ್ಯಾಯಾಧೀಶರ, ನ್ಯಾಯಾಲಯದಲ್ಲಿ ತನಗಾದ ಮಾನಹಾನಿಗಾಗಿ ಓ.ಎಸ್.ನಂ. 109/2017 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಈ ಸಂಬಂಧ ನನ್ನ ಮತ್ತು ಇತರೆ 32 ಜನ ಮತ್ತು ಎದುರುದಾರರ ನಡುವೆ ಕ್ರಿಮಿನಲ್ ಪ್ರಕರಣಗಳು ಸಹ ನಡೆಯುತ್ತಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ತೊಂದರೆ ನೀಡುವ ಉದ್ದೇಶದಿಂದ ಈ ರೀತಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸತ್ತ ಜಾಗಕ್ಕೆ ಜನ ಬರುತ್ತಾರೆ ಹೊರತು, ಜನ ಇರುವ ಜಾಗಕ್ಕೆ ಶವವನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದರೆ ಸಾಕ್ಷಿ ಸತ್ತ ಮಗುವು ಎರಡನೇ ಮಗು ಆದ ಕಾರಣ ಅದು ತಂದೆ ಮನೆಗೆ ಸೇರಿದ್ದು ಎಂಬ ಉದ್ದೇಶದಿಂದ ಶವವನ್ನು ಅಲ್ಲಿಗೆ ತೆಗೆದುಕೊಂಡು ಹೋಗಿರುವುದಾಗಿ ನುಡಿಯುತ್ತಾರೆ. ಯಳಂದೂರು ಪೊಲೀಸರು ನಾನು ಶವವನ್ನು ಇಟ್ಟುಕೊಂಡು ಗಲಾಟೆ ಮಾಡುತ್ತಿದ್ದುದ್ದನ್ನು ನೋಡಿ ಶವಸಂಸ್ಕಾರ ಮಾಡದೇ ಇದ್ದ ಪಕ್ಷದಲ್ಲಿ ನಮ್ಮಗಳ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಬೈದಿದ್ದರಿಂದ ನಾವು ಅಲ್ಲಿಂದ ಹೊರಟು ಬಂದಿರುತ್ತೇವೆ ಎಂದರೆ ಸರಿಯಲ್ಲ.

10. ಎದುರುದಾರರು ನನ್ನ ವಿರುದ್ಧ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಎದುರುದಾರರ ಮತ್ತು ಆತನ ಮನೆಯವರು ನನಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು ಎಂದು ನಾನು ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಎದುರುದಾರರು ಮತ್ತು ಅವರ ತಾಯಿ,ಅಕ್ಕ ಮತ್ತು ಅಣ್ಣ ನನಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದರು ಎಂದು ನಾನು ಯಾವುದೇ ಪ್ರಕರಣವನ್ನು ಎದುರುದಾರರು ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಸಲ್ಲಿಸಿರುವುದಿಲ್ಲ. ಎದುರುದಾರರು ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ ನಂತರ ನಾನು ಕಥೆಗಳನ್ನು ಕಟ್ಟಿ ಅವರ ವಿರುದ್ದ ಕೇಸುಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಕೇಸನ್ನು ಸಹ ಸುಳ್ಳು ಕಥೆ ಕಟ್ಟಿಯೇ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತಿಂಗಳಿಗೆ ರೂ.66,337/- ಸಂಬಳ ಬರುತ್ತದೆ ಎಂದರೆ ಸರಿ. ಸದರಿ ಸಂಬಳದಲ್ಲಿ ರೂ.28,437/- ಗಳು ಕಡಿತಗೊಳ್ಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಹಣದಲ್ಲಿ ರೂ.13,500/-ಗಳನ್ನು ಮನೆಯ ಸಾಲದ ಕಂತಿಗೆ ಕಟ್ಟುತ್ತಿರುತ್ತಾರೆ ಎಂದರೆ ಸರಿಯಲ್ಲ. ರೂ.2,827/-ಗಳನ್ನು

ವೈಯಕ್ತಿದ ಸಾಲದ ಕಂತನ್ನು ಕಟ್ಟಲು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರ ಅವಿವಾಹಿತ ಅಕ್ಕನಿಗೆ ಎದುರುದಾರರ ತಂದೆಯವರು 0.7 ಗುಂಟೆ ಜಮೀನನ್ನು ನೀಡಿದ್ದು, ಆ ಜಮೀನಿನ ಸಂಬಂಧ ಎದುರುದಾರರಿಗೂ ಅವರ ಅಣ್ಣನ ಮಗನಿಗೂ ವೈಷಮ್ಯವಿದ್ದುದ್ದರಿಂದ ಎದುರುದಾರರ ಅಣ್ಣನ ಮಗನು ಎದುರುದಾರರನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಅಪಘಾತ ಮಾಡಿದ್ದರಿಂದ ಎದುರುದಾರರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಸುಮಾರು ರೂ.15,00,000/- ಗಳನ್ನು ಸಾಲ ಮಾಡಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಲದ ಸಂಬಂಧ ಇದುವರೆವಿಗೆ ಎದುರದಾರರು ರೂ.3,50,000/- ಗಳನ್ನು ತೀರುವಳಿ ಮಾಡಿದ್ದು, ಉಳಿದ ಹಣವನ್ನು ತೀರುವಳಿ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿ ತಿಂಗಳು ಮಗವಿನ ವಿದ್ಯಾಭ್ಯಾಸ ಮತ್ತು ಇತರೆ ಪಠ್ಯೇತರ ಚಟುವಟಿಕೆಗಳಿಗೆ ಪ್ರತಿ ತಿಂಗಳು ರೂ.6,500/- ಖರ್ಚಾಗುತ್ತಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರ ತಾಯಿ ಮತ್ತು ಅವರ ಅವಿವಾಹಿತ ಅಕ್ಕ ಸಂಪೂರ್ಣವಾಗಿ ಎದುರುದಾರರ ಆದಾಯವನ್ನೇ ಅವಲಂಭಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಪಿಂಚಣಿ ಬರುತ್ತದೆ ಎಂದು ನುಡಿಯುತ್ತಾರೆ. ಎದುರುದಾರರ ತಾಯಿ ಮತ್ತು ಅಕ್ಕನಿಗೆ ಪಿಂಚಣಿ ಬರುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದಾದರೂ ದಾಖಲೆಯನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಿರಾ ಎಂಬ ಪ್ರಶ್ನೆಗೆ ಹಾಜರುಪಡಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಎದುರುದಾರರ ತಾಯಿ ಮತ್ತು ಅಕ್ಕನಿಗೆ ಹೊರಗಿನಿಂದ ಯಾವುದೇ ಪಿಂಚಣಿ ಬರುತ್ತಿರುವುದಿಲ್ಲ ಎಂದರೆ ಸರಿಯಲ್ಲ. ಎಂ.ಸಿ ಪ್ರಕರಣದಲ್ಲಿ ನನಗೆ ಪ್ರತಿ ತಿಂಗಳು ರೂ.600/- ಗಳನ್ನು ಜೀವನಾಂಶವಾಗಿ ನೀಡಲಾಗುತ್ತಿರುತ್ತದೆ ಎಂದರೆ ಸರಿ. ದಾವೆಯ ವೆಚ್ಚವಾಗಿ ರೂ.3,500/- ಎದುರುದಾರರಿಗೆ ನನಗೆ ನೀಡಿರುತ್ತಾರೆ ಎಂದರೆ ಸರಿ. ಇಷ್ಟೆಲ್ಲಾ ಖರ್ಚು ಕಳೆದು ನ್ಯಾಯಾಲಯದಲ್ಲಿ ಹೂಡಿರುವ ಪ್ರಕರಣಗಳ ಖರ್ಚಿಗೆಂದು ಎದುರುದಾರರಿಗೆ ಬರುವ ಸಂಬಳ ಸಾಕಾಗದೇ ಬೇರೆ ಕಡೆ ಸಾಲ ಮಾಡಿ ಜೀವನ ನಡೆಸುತ್ತಿರುತ್ತಾರೆ ಎಂದರೆ ಸರಿಯಲ್ಲ.

11. ನಾನು ಕಂಪ್ಯೂಟರ್ ತರಬೇತಿ ಮತ್ತು ಟೈಲರಿಂಗ್ ತರಬೇತಿಯನ್ನು ಪಡೆದಿರುತ್ತೇನೆ ಎಂದರೆ ಸರಿ. ನಾನು ಪ್ರತಿ ತಿಂಗಳು ಟೈಲರಿಂಗ್‌ನಿಂದ ರೂ.15,000/- ಗಳ ಆದಾಯವನ್ನು

ಗಳಿಸುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು ವಿದ್ಯಾವಂತಳಾಗಿದ್ದು ನನ್ನನ್ನು ನಾನು ನೋಡಿಕೊಳ್ಳುವಷ್ಟು ದೈಹಿಕ ಮತ್ತು ಮಾನಸಿಕವಾಗಿ ಶಕ್ತಳಾಗಿರುತ್ತೇನೆ ಎಂದರೆ ಸರಿಯಲ್ಲ. ನಂಜನಗೂಡು ಮತ್ತು ಮೈಸೂರಿನಲ್ಲಿ ಮಹಿಳೆಯವರು ಬಟ್ಟೆ ಅಂಗಡಿ ಮತ್ತು ಇತರೇ ಶಾಪ್‌ಗಳಲ್ಲಿ ಕೆಲಸ ಮಾಡಿ ತಿಂಗಳಿಗೆ ರೂ.12,000/- ರಿಂದ ರೂ.15,000/- ಗಳನ್ನು ಸಂಪಾದನೆ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದೈಹಿಕವಾಗಿ ಮತ್ತು ಮಾನಸಿಕವಾಗಿ ದುಡಿಯಲು ಸಮರ್ಥಳಾಗಿದ್ದಳು ಸಹ ಕಾನೂನು ಬಾಹಿರವಾಗಿ ಪ್ರತಿ ತಿಂಗಳು ಎದುರುದಾರರಿಂದ ರೂ.30,000/- ಗಳನ್ನು ಜೀವನಾಂಶ ಕೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು ದುಡಿಯಲು ಶಕ್ತಳಾಗಿದ್ದು, ಪ್ರತಿ ತಿಂಗಳು ರೂ.15,000/- ಗಳನ್ನು ಸಂಪಾದನೆ ಮಾಡುತ್ತಿದ್ದರು ಸಹ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ಯಾವುದೇ ರೀತಿ ಜೀವನಾಂಶ ಕೊಡಲು ಭಾದ್ಯರಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ತಿಳಿಸಿರುವ ವಿಚಾರಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ.ನ್ಯಾದಂ. ನಂಜನಗೂಡು**